ಓ ಎಸ್ ನಂ. 17/2021
ಡಿ ಡಬ್ಲ್ಯು 5
ದಿನಾಂಕ 23/03/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿಗಳ ಪರಃ ಶ್ರೀ ಎಸ್ ಸಿ ಎನ್ ವಕೀಲರಿಂದಃ

ದಾವೆ ಸಲ್ಲಿಸುವ ಸಮಯದಲ್ಲಿ ನನಗೂ ದಾವಾ ಆಸ್ತಿಗಳಲ್ಲಿ ಭಾಗ ಬೇಕು ಎಂದು ನಾನು ಪ್ರಸ್ತುತ ದಾವೆಯನ್ನು ಇತರೇ ವಾದಿಗಳ ಜತೆ ಹೂಡಿರುತ್ತೇನೆ ಎಂದರೆ ಸರಿ. 1 ನೇ ಪ್ರತಿವಾದಿ ಕಾಳಮ್ಮರವರು ದಾವಾ ಐಟಂ ನಂ.1 ರ ಆಸ್ತಿಗೆ ಸಂಬಂದಪಟ್ಟಂತೆ ದಾನಪತ್ರ ಮಾಡಿಸಿಕೊಂಡಿರುವ ವಿಚಾರ ನನಗೆ ಗೊತ್ತಿದೆಯಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ದಾನಪತ್ರವಾಗುವ ಸಮಯದಲ್ಲಿ ದಾವಾ ಐಟಂ ನಂ.1 ರ ಆಸ್ತಿಯ ಖಾತೆ ಯಾರ ಹೆಸರಿನಲ್ಲಿತ್ತು ಎಂದರೆ ಸಾಕ್ಷಿ ನನ್ನ ಅಜ್ಜಿ ರುದ್ರಮ್ಮರವರ ಹೆಸರಿನಲ್ಲಿತ್ತು ಎಂದು ನುಡಿಯುತ್ತಾರೆ. ಸದರಿ ಸ್ವತ್ತು ರುದ್ರಮ್ಮರವರಿಗೆ ಹೇಗೆ ಬಂತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.1 ರ ಆಸ್ತಿಯ ಬಾಬ್ತು ನನ್ನ ಚಿಕ್ಕಪ್ಪ ಮಂಜುನಾಥರವರು ನ್ಯಾಯಾಲಯದಲ್ಲಿ ಭಾಗಕ್ಕಾಗಿ ದಾವೆ ಹೂಡಿ ಡಿಕ್ರಿ ಪಡೆದಿರುವ ವಿಚಾರ ನನಗೆ ಗೊತ್ತಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ.

ದಾವಾ ಐಟಂ ನಂ.2 ರ ಆಸ್ತಿ ನನ್ನ ತಂದೆಗೆ ಅವರ ಅಣ್ಣತಮ್ಮಂದಿರು ಮಾಡಿಕೊಂಡ ವಿಭಾಗದಲ್ಲಿ ಬಂದಿರುವ ಆಸ್ತಿ ಎಂದರೆ ಸರಿ. ನನ್ನ ತಂದೆ ಸಿದ್ದಪ್ಪರವರು ಅವರ ಮೊದಲನೇ ಹೆಂಡತಿಯಾದ ಸುಭದ್ರಮ್ಮರವರ ಬದುಕಿರುವಾಗಲೇ ಅವರು ಈ ದಾವೆಯ 1 ನೇ ಪ್ರತಿವಾದಿಯಾದ ಕಾಳಮ್ಮರವರನ್ನು ವಿವಾಹ ಆಗಿರುತ್ತಾರೆ ಎಂದರೆ ಸರಿ. ಸದರಿ ಕಾಳಮ್ಮ ನನ್ನ ತಾಯಿ ಸುಭದ್ರಮ್ಮರವರ ಸ್ವಂತ ತಂಗಿ ಎಂದರೆ ಸರಿ. ನನ್ನ ತಂದೆ ಸಿದ್ದಪ್ಪರವರು ಅವರ ಜೀವಿತಾವಧಿಯಲ್ಲಿ ಹಾಸ್ಟೇಲ್ ನಲ್ಲಿ ಅಡುಗೆ ಮಾಡುವ ಕೆಲಸ ಮಾಡುತ್ತಿದ್ದರು ಎಂದರೆ ಸರಿ.

2018 ರಲ್ಲಿ ದಾವಾ ಐಟಂ ನಂ.2 ರ ಆಸ್ತಿಯನ್ನು ಮಾರಾಟ ಮಾಡುವ ಸಮಯದಲ್ಲಿ ನನ್ನ ತಂದೆ ಸಿದ್ದಪ್ಪರವರು ಬದುಕಿದ್ದರು ಎಂದರೆ ಸರಿ. ಅವರು ಉತ್ತಮ ಆರೋಗ್ಯ ಹೊಂದಿದ್ದರು ಎಂದರೆ ಸಾಕ್ಷಿ ಸ್ವಲ್ಪ ಆರೋಗ್ಯ ಸಮಸ್ಯೆ ಇತ್ತು ಎಂದು ನುಡಿಯುತ್ತಾರೆ. ಏನು ಸಮಸ್ಯೆ ಇತ್ತು ಎಂದರೆ ಸಾಕ್ಷಿ ಹೃದಯ ಶಸ್ತ್ರ ಚಿಕಿತ್ಸೆಯಾಗಿತ್ತು ಎಂದು ನುಡಿಯುತ್ತಾರೆ. ಶಿವಮೊಗ್ಗದ ಮ್ಯಾಕ್ಸ್ ಆಸ್ಪತ್ರೆಯಲ್ಲಿ ಸದರಿ ಶಸ್ತ್ರ ಚಿಕಿತ್ಸೆಯಾಗಿರುತ್ತದೆ. ಆ ರೀತಿ ಶಸ್ತ್ರ ಚಿಕಿತ್ಸೆ ಸುಮಾರು 7-8 ವರ್ಷಗಳ ಹಿಂದೆ ಆಗಿರಬಹುದು. ದಾವಾ ಐಟಂ ನಂ.2 ರ ಆಸ್ತಿಯನ್ನು ಮಾರಾಟ ಮಾಡುತ್ತಿರುವ ವಿಚಾರವನ್ನು ನನಗೆ ಮತ್ತು ಇತರೆ ನನ್ನ ಸಹೋದರಿಯರಾದ ವಾದಿಗಳಿಗೆ ಹೇಳಿರುತ್ತಾರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದಿನಾಂಕ 12/12/2018 ರ

ಕ್ರಯಪತ್ರಕ್ಕೆ ನಾನು ಹಕ್ಕನ್ನು ಬಿಟ್ಟುಕೊಡುತ್ತಿರುವುದಾಗಿ ಸಹಿ ಮಾಡಿರುತ್ತೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ನನ್ನ ತಂದೆ ಸಿದ್ದಪ್ಪರವರು ನನ್ನಿಂದ ಏನಾದರೂ ಬರೆಸಿಕೊಂಡಿದ್ದರಾ ಎಂದರೆ ಸಾಕ್ಷಿ ಇಲ್ಲ ಆದರೆ ವಿಚಾರ ತಿಳಿಸಿದ್ದರು ಎಂದು ನುಡಿಯುತ್ತಾರೆ.

1 ಮತ್ತು 2 ನೇ ಪ್ರತಿವಾದಿಗಳು ಈಗಲೂ ಸಹ ಶಿವಮೊಗ್ಗದ ಹೊಳಲೂರಿನಲ್ಲಿ ವಾಸ ಇದ್ದಾರೆ ಎಂದರೆ ಸರಿ. ಅಲ್ಲಿ ಅವರು ಆಸ್ತಿ ಮತ್ತು ಮನೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಂದೆ ಸಿದ್ದಪ್ಪರವರು ಮರಣ ಹೊಂದಿದ ನಂತರ 1 ಮತ್ತು 2 ನೇ ಪ್ರತಿವಾದಿಗಳು ಹೊಳಲೂರಿಗೆ ಹೋಗಿ ನೆಲೆಸಿರುತ್ತಾರೆ ಎಂದರೆ ಸರಿ. ಅಲ್ಲಿಯವರೆಗೂ ಹೊಳಲೂರಿನಲ್ಲಿ 1 ಮತ್ತು 2 ನೇ ಪ್ರತಿವಾದಿಗಳು ಯಾವುದೇ ಆಸ್ತಿ ಮಾಡಿರಲಿಲ್ಲ ಎಂದರೆ ಸರಿ. ನನ್ನ ತಂದೆ ನನಗೆ ಯಾವ ವರ್ಷದಲ್ಲಿ ಕೇಳಿರುತ್ತಾರೆ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.2 ರ ಆಸ್ತಿಯನ್ನು ಎಷ್ಟು ಮೊತ್ತಕ್ಕೆ ಮಾರಾಟ ಮಾಡುತ್ತಿರುವುದಾಗಿ ನನಗೆ ಹೇಳಿರುತ್ತಾರಾ ಎಂದರೆ ಸಾಕ್ಷಿ 1 ಲಕ್ಷಕ್ಕೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತನ್ನು ನಿಖರವಾಗಿ ಎಷ್ಟು ಮೊತ್ತಕ್ಕೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ 1 ಲಕ್ಷಕ್ಕೆ ಎಂದು ನುಡಿಯುತ್ತಾರೆ. ನನ್ನ ತಂದೆ ಅವರ ಜೀವಿತಾವಧಿಯಲ್ಲಿ ಸರ್ಕಾರಿ ನೌಕರಿಯಲ್ಲಿದ್ದು ಅವರಿಗೆ ಯಾವುದೇ ಆರೋಗ್ಯದ ಸಮಸ್ಯೆ ಇರಲಿಲ್ಲ ಎಂದರೆ ಸಾಕ್ಷಿ ಅವರಿಗೆ ಹೃದ್ರೋಗ

ಸಮಸ್ಯೆ ಇತ್ತು ಎಂದು ನುಡಿಯುತ್ತಾರೆ. ದಾವಾ ಐಟಂ ನಂ.2 ರ ಆಸ್ತಿಯು ಪಿತ್ರಾರ್ಜಿತ ಆಸ್ತಿಯಾಗಿದ್ದು ಅದರಲ್ಲಿ ನನಗೂ ಮತ್ತು ಇತರೇ ವಾದಿಗಳಿಗೂ ಸಮಾನವಾದ ಹಿಸ್ಸೆ ಇದೆ ಎಂದರೆ ಸರಿ.

ಮರುವಿಚಾರಣೆ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.